ಅಸಲು ದಾವಾ.ನಂ. 257/2025
ಪಿ ಡಬ್ಲ್ಯೂ-1

ದಿನಾಂಕಃ 16-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ:**

ನಾನು ನನ್ನ ಸಾಕ್ಷ್ಯಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು, ಅದರಲ್ಲಿ ಬರೆದ ವಿಷಯಗಳು ಸರಿ ಇರುತ್ತವೆ. ಸದರಿ ವಿಷಯವನ್ನು ತಿಳಿದುಕೊಂಡು ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಮೇಲೆ ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲ ಸಂಗತಿಗಳು ನಿಜ ಇರುತ್ತವೆ. ನನ್ನ ವಾದ ಪತ್ರಕ್ಕೆ ಪೂರಕವಾಗಿ ಕೆಲವೊಂದು ದಾಖಲೆಗಳನ್ನು ಹಾಜರಪಡಿರಸಿರುತ್ತೇನೆ. ಅವುಗಳನ್ನು ಗುರುತಿಸುವಂತೆ ಕೋರುತ್ತಾರೆ.

| | |
|---|---|
| 1. | ಎರಡು ಪಹಣಿ ಪತ್ರಿಕೆ ಹಾಜರಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು. |
| 2. | ಪ್ರತಿವಾದಿಯರು ಬರೆದುಕೊಟ್ಟ ಮೂಲ ಖರೀದಿ ಕರಾರು ಪತ್ರ ಹಾಜರಪಡಿಸಿರುತ್ತೇನೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಸಾಕ್ಷಿ ತನ್ನ ಮತ್ತು 3 ನೇ ಪ್ರತಿವಾದಿಯ ಹೆಬ್ಬೆಟ್ಟಿನ ಸಹಿ ಗುರುತಿಸಿರುತ್ತಾರೆ. ನಿಪಿ-3 ರಲ್ಲಿಯ 1 ನೇ ಪ್ರತಿವಾದಿಯ ಸಹಿ ಗುರುತಿಸಿದ್ದು, ಅದನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ನಿಪಿ-3 ಕ್ಕೆ ರಾಘವೇಂದ್ರ ಸಿದ್ದಣ್ಣನವರ, ಸಂಗಪ್ಪ ಮಿರ್ಜಿ ಮತ್ತು ಕಲ್ಮಡಿ ಇವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. |
| 3. | ನೋಟಿಸಿನ ಪ್ರತಿ ಹಾಜರಪಡಿಸಿರುತ್ತೇನೆ. ಅದನ್ನು ನಿಪಿ-4 ಎಂದು ಗುರುತಿಸಲಾಯಿತು. |
| 4. | ಅಂಚೆ ರಶೀದಿ ಹಾಜರಪಡಿಸಿರುತ್ತೇನೆ. ಅದನ್ನು ನಿಪಿ-5 ಎಂದು ಗುರುತಿಸಲಾಯಿತು. |
| 5. | ಪ್ರತ್ಯುತ್ತರದ ನೋಟಿಸನ್ನು ಹಾಜರಪಡಿಸಿರುತ್ತೇನೆ. ಅದನ್ನು ನಿಪಿ-6 ಎಂದು ಗುರುತಿಸಲಾಯಿತು. |
| 6. | ಇನ್ನೊಂದು ನೋಟಿಸಿನ ಪ್ರತಿ ಹಾಜರಪಡಿಸಿರುತ್ತೇನೆ. ಅದನ್ನು ನಿಪಿ-7 ಎಂದು ಗುರುತಿಸಲಾಯಿತು. |
| 7. | ಅಂಚೆ ರಶೀದಿ ಹಾಜರಪಡಿಸಿರುತ್ತೇನೆ. ಅದನ್ನು ನಿಪಿ-8 ಎಂದು ಗುರುತಿಸಲಾಯಿತು. |
| 8. | ಅಂಚೆ ಸ್ವೀಕೃತಿ ಹಾಜರಪಡಿಸಿರುತ್ತೇನೆ. ಅದನ್ನು ನಿಪಿ-9 ಎಂದು ಗುರುತಿಸಲಾಯಿತು. |
| 9. | ಪ್ರತ್ಯುತ್ತರದ ನೋಟಿಸನ್ನು ಹಾಜರಪಡಿಸಿರುತ್ತೇನೆ. ಅದನ್ನು ನಿಪಿ-10 ಎಂದು ಗುರುತಿಸಲಾಯಿತು. |

ಈ ಹಂತದಲ್ಲಿ ಸದರಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು,

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2026.06.16 17:36:49 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ